**All India Radio: Bangalore**
**National Bulletin In Kannada**
**16.06.2026  13.10 hrs**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**16.06.2026  13.10 hrs**

**<><><*><><<>**

ಮುಖ್ಯಾಂಶಗಳು

೧.    ಜಿ-೭ ಶೃಂಗಸಭೆಯಲ್ಲಿಂದು ಪಾಲ್ಗೊಳ್ಳಲು ಫ್ರಾನ್ಸ್‌ನ ಎವಿಯನ್‌ಗೆ ಪ್ರಯಾಣ ಬೆಳೆಸಿದ ಪ್ರಧಾನಿ ನರೇಂದ್ರ ಮೋದಿ

೨.    ಪ್ರಜಾಪ್ರಭುತ್ವದ ಮೌಲ್ಯಗಳನ್ನರಿತು ದೇಶದ ಪ್ರಗತಿಯಲ್ಲಿ ಕೈಜೋಡಿಸಲು ಯುವ ಜನತೆಗೆ ಕರೆ ನೀಡಿದ ಲೋಕಸಭಾಧ್ಯಕ್ಷ ಓಂ ಬಿರ್ಲಾ

೩.    ವಿಶ್ವಸಂಸ್ಥೆ ಭದ್ರತಾ ಮಂಡಳಿ ಸುಧಾರಣೆ ; ಖಾಯಂ ಅಲ್ಲದ ಸದಸ್ಯತ್ವ ವಿಸ್ತರಣೆ  ಪ್ರಸ್ತಾಪ ತಿರಸ್ಕರಿಸಿದ ಭಾರತ

೪.    ಓಮನ್ ಕರಾವಳಿ ದುರಂತ ; ಸ್ವದೇಶಕ್ಕೆ ಮರಳಿದ 'ಎಂಟಿ ಸೆಟ್ಟೆಬೆಲ್ಲೊ' ಹಡಗಿನ ೨೧ ಭಾರತೀಯ ಸಿಬ್ಬಂದಿ

೫.    ಫಿಫಾ ವಿಶ್ವಕಪ್ ಫುಟ್ಬಾಲ್ ಟೂರ್ನಿ ; ಇರಾನ್-ನ್ಯೂಜಿಲೆಂಡ್ ನಡುವಿನ ಪಂದ್ಯ ಡ್ರಾನಲ್ಲಿ ಅಂತ್ಯ

**<><><*><><<>**

ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಎರಡು ರಾಷ್ಟ್ರಗಳ ಪ್ರವಾಸದ ಮೂರನೇ ಚರಣದ ಭಾಗವಾಗಿ ಜಿ-೭ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಇಂದು ಎರಡು ದಿನಗಳ ಭೇಟಿಗಾಗಿ ಫ್ರಾನ್ಸ್‌ನ ಎವಿಯನ್‌ಗೆ ಪ್ರಯಾಣ ಬೆಳೆಸಿದ್ದಾರೆ. ಸ್ಲೋವಾಕಿಯಾ ಪ್ರಧಾನಿ ರಾಬರ್ಟ್ ಫಿಕೊ ಬ್ರಾಟಿಸ್ಲಾವಾದಿಂದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಬೀಳ್ಕೊಟ್ಟರು. ಫ್ರಾನ್ಸ್‌ಗೆ ಆಗಮಿಸಲಿರುವ ಪ್ರಧಾನಿಯವರನ್ನು ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರಾನ್ ಅವರು ಸ್ವಾಗತಿಸಲಿದ್ದಾರೆ. ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರು, ಜಿ-೭ ರಾಷ್ಟ್ರಗಳು, ಪಾಲುದಾರ ದೇಶಗಳ ನಾಯಕರು ಹಾಗೂ ವಿಶ್ವ ಬ್ಯಾಂಕ್ ಮತ್ತು ಆಫ್ರಿಕನ್ ಅಭಿವೃದ್ಧಿ ಬ್ಯಾಂಕ್‌ನ

ಪ್ರತಿನಿಧಿಗಳೊಂದಿಗೆ "ಹೊಸ ಸಹಭಾಗಿತ್ವವನ್ನು ರೂಪಿಸುವುದು ಮತ್ತು ಅಂತರರಾಷ್ಟ್ರೀಯ ಐಕ್ಯತೆಯನ್ನು ಮರುನಿರ್ಮಾಣ ಮಾಡುವುದು" ಎಂಬ ವಿಷಯದ ಕುರಿತಾದ ಕಾರ್ಯಕಾರಿ ಗೋಷ್ಠಿಯಲ್ಲಿ ಭಾಗವಹಿಸಲಿದ್ದಾರೆ. ಈ ಸಭೆಯ ಹಿನ್ನೆಲೆಯಲ್ಲೇ ಅವರು ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ, ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಮತ್ತು ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ. ತದನಂತರ ಫ್ರಾನ್ಸ್ ಅಧ್ಯಕ್ಷರು ಆಯೋಜಿಸಿರುವ ಗಾಲಾ ಔತಣಕೂಟದಲ್ಲೂ ಪ್ರಧಾನಿ ಪಾಲ್ಗೊಳ್ಳಲಿದ್ದಾರೆ.

**<>><><*><><<>**

ಪ್ರಜಾಪ್ರಭುತ್ವದ ಮೌಲ್ಯಗಳನ್ನು ಅರಿತು ದೇಶದ ಪ್ರಗತಿಯಲ್ಲಿ ಸಕ್ರಿಯವಾಗಿ ಕೈಜೋಡಿಸಬೇಕು ಎಂದು ಲೋಕಸಭೆಯ ಸಭಾಧ್ಯಕ್ಷ ಓಂ ಬಿರ್ಲಾ ಯುವಜನತೆಗೆ ಕರೆ ನೀಡಿದ್ದಾರೆ. ಕೇಂದ್ರ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯ ವತಿಯಿಂದ ನವದೆಹಲಿಯಲ್ಲಿ ಇಂದು ಆಯೋಜಿಸಲಾಗಿರುವ ರಾಷ್ಟ್ರಮಟ್ಟದ ವಿಕಸಿತ ಭಾರತ ಯುವ ಸಂಸತ್ತನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಷ್ಟ್ರದ ಭವಿಷ್ಯ ರೂಪಿಸಲು ಮತ್ತು ವಿಕಸಿತ ಭಾರತದ ಗುರಿ ಸಾಧನೆಗೆ ಪ್ರತಿಯೊಬ್ಬ ನಾಗರಿಕನ ಭಾಗವಹಿಸುವಿಕೆ ಮುಖ್ಯವಾಗಿದ್ದು, ಪ್ರಜಾಪ್ರಭುತ್ವದ ಯಶಸ್ಸಿಗೆ ಸಾರ್ವಜನಿಕರ ಸಕ್ರಿಯ ಪಾಲ್ಗೊಳ್ಳುವಿಕೆ ಅತ್ಯಗತ್ಯ ಎಂದರು. ವೈವಿಧ್ಯಮಯ ಸಂಸ್ಕೃತಿ ಮತ್ತು ವಿಭಿನ್ನ ಭೌಗೋಳಿಕ ಪರಿಸ್ಥಿತಿಗಳೊಂದಿಗೆ ವಿಶ್ವದಲ್ಲೇ ಅತಿಹೆಚ್ಚು ಜನಸಂಖ್ಯೆ ಹೊಂದಿದ್ದರೂ, ಸ್ವಾತಂತ್ರ್ಯದ ನಂತರ ಭಾರತ ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿ ಹೊರ ಹೊಮ್ಮಿದೆ. ದೇಶದ ಕಾರ್ಯಸಂಸ್ಕೃತಿ ಹಾಗೂ ಚಿಂತನಾ ಪ್ರಕ್ರಿಯೆಯಲ್ಲಿ ಪ್ರಜಾಪ್ರಭುತ್ವದ ಹಿಂದಿನಿಂದಲೂ ಒಂದು ಅವಿಭಾಜ್ಯ ಅಂಗವಾಗಿ ಉಳಿದುಕೊಂಡಿದೆ ಎಂದು ತಿಳಿಸಿದರು.

**<>><><*><><<>**

ಇದೇ ೨೧ ರಂದು ನಡೆಯಲಿರುವ ರಾಷ್ಟ್ರೀಯ ಪ್ರವೇಶ ಮತ್ತು ಅರ್ಹತಾ ಪರೀಕ್ಷೆ ನೀಟ್ ಯುಜಿ ೨೦೨೪ರ ಮರುಪರೀಕ್ಷೆಗೆ ಮುಂಚಿತವಾಗಿ, ಸರ್ಕಾರ ಈ ತಿಂಗಳ ೨೨ ರವರೆಗೆ ಆನ್‌ಲೈನ್ ಸಂದೇಶ ಕಳುಹಿಸುವ ಸಾಮಾಜಿಕ ಮಾಧ್ಯಮ ಅಪ್ಲಿಕೇಶನ್ ಟೆಲಿಗ್ರಾಮ್ ಅನ್ನು ನಿರ್ಬಂಧಿಸಿದೆ. ಭಾರತದಲ್ಲಿ ಟೆಲಿಗ್ರಾಮ್ ಬಳಕೆಯನ್ನು ನಿರ್ದಿಷ್ಟ ಮತ್ತು ಸೀಮಿತ ಅವಧಿಗೆ ನಿರ್ಬಂಧಿಸುವ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ನಿರ್ದೇಶನಗಳನ್ನು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ-ಎನ್‌ಟಿಎ ಸ್ವಾಗತಿಸಿದೆ. ನೀಟ್ ಯುಜಿ ೨೦೨೪ರ ಮರುಪರೀಕ್ಷೆಯ ದಿನ ಮತ್ತು ಅದರ ತಕ್ಷಣದ ನಂತರದ ಅವಧಿಯನ್ನು ನಿರ್ಬಂಧವು ಒಳಗೊಂಡಿದೆ ಎಂದು ತಿಳಿಸಿರುವ ಪರೀಕ್ಷಾ

ಸಂಸ್ಥೆ, ಈ ತಿಂಗಳ ೩೦ ರವರೆಗೆ ಈಗಾಗಲೇ ಪೋಸ್ಟ್ ಮಾಡಲಾದ ಸಂದೇಶಗಳಿಗೆ ಸಂದೇಶ-ಸಂಪಾದನೆ ವೈಶಿಷ್ಟ್ಯವನ್ನು ನಿಷ್ಕ್ರಿಯಗೊಳಿಸಲು ನಿರ್ದೇಶಿಸಲಾಗಿದೆ ಎಂದಿದೆ. ಸಾರ್ವಜನಿಕ ಸುವ್ಯವಸ್ಥೆಯ ಹಿತದೃಷ್ಟಿಯಿಂದ ಮತ್ತು ಮರು ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳನ್ನು ವಂಚಿಸಲು, ಈ ವೇದಿಕೆಯನ್ನು ಬಳಸಿಕೊಂಡಿದ್ದರ ಹಿನ್ನೆಲೆಯಲ್ಲಿ ಈ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

**<>><><*><><<>**

ಮುಂಬರುವ ನೀಟ್-ಯುಜಿ ಮರುಪರೀಕ್ಷೆ ೨೦೨೪ಕ್ಕೆ ಪ್ರವೇಶ ಪತ್ರ ಡೌನ್‌ಲೋಡ್ ಸೌಲಭ್ಯವನ್ನು ಪ್ರಾರಂಭಿಸಿದ ೨೪ ಗಂಟೆಗಳ ಒಳಗೆ ೧೦ ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳು ತಮ್ಮ ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಂಡಿದ್ದಾರೆ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ತಿಳಿಸಿದೆ. ಎಲ್ಲಾ ಅಭ್ಯರ್ಥಿಗಳಿಗೆ ಸುಗಮ ಪ್ರವೇಶವನ್ನು ಖಚಿತಪಡಿಸಿಕೊಳ್ಳಲು ಸರ್ವರ್‌ಗಳಲ್ಲಿನ ಒತ್ತಡವನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಲಾಗುತ್ತಿದೆ ಎಂದು ಸಂಸ್ಥೆ ತಿಳಿಸಿದೆ.

**<>><><*><><<>**

ವಾಹನಗಳಲ್ಲಿ ಇ-೨೦ ಇಂಧನವನ್ನು ಬಳಸುವುದರಿಂದ ವಾಹನ ವಿಮೆ ಹಕ್ಕುಗಳು ರದ್ದಾಗುತ್ತವೆ ಎಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದ ಸಂದೇಶಗಳನ್ನು ಕೇಂದ್ರ ಸರ್ಕಾರ ತಳ್ಳಿಹಾಕಿದೆ. ಈ ಕುರಿತು ಸ್ಪಷ್ಟನೆ ನೀಡಿರುವ ಪಿಐಬಿಯ ಸತ್ಯಶೋಧನಾ ಘಟಕ ಈ ಸುದ್ದಿ ಸಂಪೂರ್ಣ ಸುಳ್ಳಾಗಿದ್ದು, ಆಧಾರರಹಿತವಾಗಿದೆ ಎಂದು ತಿಳಿಸಿದೆ.

ಇ-೨೦ ಇಂಧನವನ್ನು ಬಳಸಿದರೂ ಸಹ ಮೋಟಾರು ವಿಮೆ ಪಾಲಿಸಿಗಳು ಎಂದಿನಂತೆ ಸಿಂಧುವಾಗಿರುತ್ತವೆ. ಹಾಗೂ ನಿಯಮಾನುಸಾರ ವಿಮಾ ಸೌಲಭ್ಯಗಳು ದೊರೆಯಲಿವೆ ಎಂದು ಪಿಐಬಿ ಸ್ಪಷ್ಟಪಡಿಸಿದೆ. ಸಾರ್ವಜನಿಕರು ಇಂತಹ ಯಾವುದೇ ಸುಳ್ಳು ವದಂತಿಗಳಿಗೆ ಕಿವಿಗೊಡಬಾರದು ಎಂದು ವಿನಂತಿಸಿದೆ.

**<>><><*><><<>**

ವಿಶ್ವಸಂಸ್ಥೆ ಭದ್ರತಾ ಮಂಡಳಿಯಲ್ಲಿ ಕೇವಲ 'ಖಾಯಂ ಅಲ್ಲದ' ಸದಸ್ಯರ ಸಂಖ್ಯೆಯನ್ನು ಮಾತ್ರ ಹೆಚ್ಚಿಸುವ ಪ್ರಸ್ತಾಪವನ್ನು ಭಾರತ ತಿರಸ್ಕರಿಸಿದೆ. ಇಂತಹ ಅಪೂರ್ಣ ಸುಧಾರಣಾ ಕ್ರಮವು ಕೇವಲ ವಿಫಲತೆಯ ಅಂಚಿಗೆ ಮತ್ತಷ್ಟು ತಳ್ಳುತ್ತದೆ ಎಂದು  ಭಾರತ ತಿಳಿಸಿದೆ. ಭದ್ರತಾ ಮಂಡಳಿಯ ಸುಧಾರಣೆಗಾಗಿ ನಡೆದ ಅಂತರ್ ಸರ್ಕಾರಿ ಮಾತುಕತೆ ಐಜಿಎನ್ ಸಭೆಯಲ್ಲಿ ಮಾತನಾಡಿದ

ವಿಶ್ವಸಂಸ್ಥೆಯ ಭಾರತದ ಖಾಯಂ ಪ್ರತಿನಿಧಿ ಪಿ. ಹರೀಶ್, ಮಂಡಳಿಯ ಖಾಯಂ ಸದಸ್ಯತ್ವವನ್ನು ವಿಸ್ತರಿಸದೆ ಕೈಗೊಳ್ಳುವ ಯಾವುದೇ ಸುಧಾರಣೆಯು ಸದ್ಯ ಮಂಡಳಿಯಲ್ಲಿರುವ ಐದು ಪ್ರಮುಖ ರಾಷ್ಟ್ರಗಳ ನಿರ್ಧಾರ ಕೈಗೊಳ್ಳುವ ಏಕಸ್ವಾಮ್ಯ ಅಧಿಕಾರವನ್ನು ಬದಲಾಯಿಸಲು ಸಾಧ್ಯವಿಲ್ಲ ಎಂದು ಪ್ರತಿಪಾದಿಸಿದರು. ಇಟಲಿ ಮತ್ತು ಪಾಕಿಸ್ತಾನ ನೇತೃತ್ವದ ೧೨ ದೇಶಗಳಿರುವ ಒಕ್ಕೂಟ ಹೊಸ ಖಾಯಂ ಸದಸ್ಯರ ಸೇರ್ಪಡೆಯನ್ನು ವಿರೋಧಿಸುತ್ತಾ ಸುಧಾರಣಾ ಪ್ರಕ್ರಿಯೆಗೆ ಅಡ್ಡಿಪಡಿಸುತ್ತಿರುವುದನ್ನು ತರಾಟೆಗೆ ತೆಗೆದುಕೊಂಡ ಅವರು, ನಿರ್ದಿಷ್ಟ ಕಾಲಮಿತಿಯೊಳಗೆ ಸಂಧಾನ ಪಠ್ಯವನ್ನು ಸಿದ್ಧಪಡಿಸಿ ಮಾತುಕತೆ ಮುನ್ನಡೆಸುವಂತೆ ಒತ್ತಾಯಿಸಿದರು. ಭದ್ರತಾ ಮಂಡಳಿಯಲ್ಲಿ ಜಾಗತಿಕ ಸಮತೋಲನ ತರಲು ಖಾಯಂ ಸದಸ್ಯತ್ವದ ವಿಸ್ತರಣೆಯೊಂದೇ ದಾರಿಯಾಗಿದೆ ಎಂದು ಭಾರತ ಸ್ಪಷ್ಟವಾಗಿ ತಿಳಿಸಿದೆ.

**<>><><*><><<>**

ಒಮನ್ ಕರಾವಳಿಯಲ್ಲಿ ಸಂಭವಿಸಿದ ಭೀಕರ ಕಡಲ ದುರಂತದಿಂದ ಪಾರಾದ ‘ಎಂಟಿ ಸೆಟ್ಟೆಬೆಲ್ಲೊ’ ಸರಕು ಸಾಗಣೆ ಹಡಗಿನ ೨೧ ಭಾರತೀಯ ಸಿಬ್ಬಂದಿ ಸುರಕ್ಷಿತವಾಗಿ ಸ್ವದೇಶಕ್ಕೆ ಮರಳಿದ್ದಾರೆ. ಒಮನ್‌ನ ಮಸ್ಕತ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಈ ಮಾಹಿತಿ ಹಂಚಿಕೊಂಡಿದ್ದು, ಭಾರತೀಯ ರಾಯಭಾರಿಗಳು, ಸಿಬ್ಬಂದಿಯನ್ನು ಭೇಟಿಯಾಗಿ ಧೈರ್ಯ ತುಂಬಿದ್ದಾರೆ ಹಾಗೂ ಅವರ ಸುರಕ್ಷಿತ ಪ್ರಯಾಣಕ್ಕೆ ಶುಭ ಹಾರೈಸಿದ್ದಾರೆ ಎಂದು ತಿಳಿಸಿದೆ. ವಿದೇಶಗಳಲ್ಲಿರುವ ಭಾರತೀಯ ನಾಗರಿಕರ ಸುರಕ್ಷತೆ ಮತ್ತು ಕಲ್ಯಾಣಕ್ಕೆ ತಮ್ಮ ಕಚೇರಿ ಸದಾ ಬದ್ಧವಾಗಿದೆ ಎಂದು ರಾಯಭಾರ ಕಚೇರಿ ಪುನರುಚ್ಚರಿಸಿದೆ. ಪಲಾವ್ ದೇಶದ ಧ್ವಜ ಹೊತ್ತ ‘ಎಂಟಿ ಸೆಟ್ಟೆಬೆಲ್ಲೊ’ ಹಡಗು ಒಮನ್‌ನ ಸೋಹರ್ ಕರಾವಳಿಯಿಂದ ಸುಮಾರು ೩೦ ನಾಟಿಕಲ್ ಮೈಲಿ ದೂರದಲ್ಲಿದ್ದಾಗ ದಾಳಿಗೆ ಒಳಗಾಗಿತ್ತು. ಘಟನೆಯ ಬೆನ್ನಲ್ಲೇ ಒಮನ್ ಕಡಲ ಭದ್ರತಾ ಕೇಂದ್ರಕ್ಕೆ ಮಾಹಿತಿ ನೀಡಿ, ಒಮನ್ ಅಧಿಕಾರಿಗಳು ತಕ್ಷಣವೇ ಭಾರಿ ರಕ್ಷಣಾ ಕಾರ್ಯಾಚರಣೆಯನ್ನು ಆರಂಭಿಸಿದ್ದರು. ಈ ಕಾರ್ಯಾಚರಣೆಯ ಮೂಲಕ ೨೧ ಭಾರತೀಯರನ್ನು ಯಶಸ್ವಿಯಾಗಿ ರಕ್ಷಿಸಲಾಗಿದೆ, ಆದರೆ ಈ ಕಡಲ ದುರಂತದಲ್ಲಿ ಮೂವರು ಭಾರತೀಯ ನಾವಿಕರು ಮೃತಪಟ್ಟಿದ್ದರು.

**<>><><*><><<>**

ಕ್ಯಾಲಿಫೋರ್ನಿಯದಲ್ಲಿ ಇಂದು ಬೆಳಗ್ಗೆ ನಡೆದ ಫಿಫಾ ವಿಶ್ವಕಪ್ ಫುಟ್ಬಾಲ್ ಟೂರ್ನಿಯ ’ಜಿ’ ಗುಂಪಿನ ಪಂದ್ಯದಲ್ಲಿ ಇರಾನ್ ಮತ್ತು ನ್ಯೂಜಿಲೆಂಡ್ ತಂಡಗಳು ೨-೨ ಗೋಲುಗಳ ಅಂತರದಲ್ಲಿ ಸಮಬಲ ಸಾಧಿಸಿ ಪಂದ್ಯವನ್ನು ಡ್ರಾನಲ್ಲಿ ಅಂತ್ಯಗೊಳಿಸಿದೆ. ಇದಕ್ಕೂ ಮುನ್ನ ಫ್ಲೋರಿಡಾದಲ್ಲಿ ನಡೆದ

ಸೌದಿಅರೇಬಿಯಾ ಮತ್ತು ಉರುಗ್ವೇ ನಡುವಿನ 'ಹೆಚ್' ಗುಂಪಿನ ಪಂದ್ಯ ಸಹ ಡ್ರಾನಲ್ಲಿ ಅಂತ್ಯಗೊಂಡಿತು.

ಭಾರತೀಯ ಕಾಲಮಾನ ಇಂದು ಮಧ್ಯರಾತ್ರಿ ೧೨.೩೦ಕ್ಕೆ ಈಸ್ಟ್ ರುದರ್‌ಫೋರ್ಡ್‌ನಲ್ಲಿ ನಡೆಯಲಿರುವ 'ಐ' ಗುಂಪಿನ ಪಂದ್ಯದಲ್ಲಿ ಫ್ರಾನ್ಸ್ ಮತ್ತು ಸೆನೆಗಲ್ ತಂಡಗಳು ಮುಖಾಮುಖಿಯಾಗಲಿವೆ.

**<>><><*><><<>**

ನ್ಯೂಜಿಲೆಂಡ್‌ನ ಆಕ್ಲೆಂಡ್‌ನಲ್ಲಿ ನಡೆಯುತ್ತಿರುವ ಎಫ್‌ಐಎಚ್ ಹಾಕಿ ನೇಷನ್ಸ್ ಕಪ್‌ನ ಮಹಿಳಾ ಹಾಕಿಯಲ್ಲಿ, ಭಾರತವು ತನ್ನ ಎರಡನೇ ಎ ಗುಂಪಿನ ಪಂದ್ಯದಲ್ಲಿ ಜಪಾನ್ ಅನ್ನು ೨-೧ ಗೋಲುಗಳಿಂದ ಸೋಲಿಸುವ ಮೂಲಕ ಸೆಮಿಫೈನಲ್‌ಗೆ ಲಗ್ಗೆ ಇಟ್ಟಿದೆ. ಭಾರತದ ಪರ ನಾಯಕಿ ಸಲೀಮಾ ಟೆಟೆ ಮತ್ತು ಲಾಲ್ರೆಮ್ಸಿಯಾಮಿ ಭಾರತಕ್ಕಾಗಿ ಗೋಲು ಗಳಿಸಿದರು, ಜಪಾನ್ ಪರ ಹಿರಾಮಿಟ್ಸು ಐ ಏಕೈಕ ಗೋಲು ಗಳಿಸಿದರು. ಈ ಗೆಲುವಿನೊಂದಿಗೆ ಭಾರv ಎ ಗುಂಪಿನಲ್ಲಿ ಅಗ್ರಸ್ಥಾನಕ್ಕೇರಿತು. ಗುರುವಾರ ನಡೆಯಲಿರುವ ಪಂದ್ಯದಲ್ಲಿ ಭಾರತ ಉರುಗ್ವೆಯನ್ನು ಎದುರಿಸಲಿದೆ. ಪುರುಷರ ಹಾಕಿಯಲ್ಲಿ, ಭಾರತವು ನೆದರ್‌ಲ್ಯಾಂಡ್ಸ್‌ನ ರೋಟರ್‌ಡ್ಯಾಮ್‌ನಲ್ಲಿ ನಡೆಯುತ್ತಿರುವ ಎಫ್‌ಐಎಚ್ ಹಾಕಿ ಪ್ರೊ ಲೀಗ್‌ನಲ್ಲಿ ಜರ್ಮನಿಯನ್ನು ಎದುರಿಸಲಿದೆ.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<>><><ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೨.೩೦ ಕ್ಕೆ ><><<>**